ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ಆನವಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಸೊರಬ ತಾಲ್ಲೂಕಿನ ಆನವಟ್ಟಿ ಗ್ರಾಮದ ಸರ್ವೆ ನಂ. 10ರಲ್ಲಿ 4 ಎಕರೆ ಜಮೀನನ್ನು ಮಂಜೂರು ಮಾಡಲಾಗಿದ್ದು, ಈ ಜಮೀನನ್ನು ಮಂಜೂರು ಮಾಡುವಾಗ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ಜಮೀನನ್ನು ವರ್ಗಾಯಿಸಲು ಷರತ್ತು ವಿಧಿಸಲಾಗಿತ್ತು. ಈ ಬಗ್ಗೆ ಕಂದಾಯ ಇಲಾಖೆಯಿಂದ ಕ್ರಮ ಕೈಗೊಂಡು ಜಮೀನನ್ನು ಈ ಇಲಾಖೆಯ ವಶಕ್ಕೆ ನೀಡಿದ ಕೂಡಲೇ ಕಟ್ಟಡ ನಿರ್ಮಾಣದ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಆ) ಹೌದು, ಸದ್ರಿ ಕಾಲೇಜಿಗೆ ಉಪನ್ಯಾಸಕರ ವಿವಿಧ ವಿಷಯಗಳಲ್ಲಿ ಒಟ್ಟು 05 ಹುದ್ದೆಗಳು ಮಂಜೂರಾಗಿದ್ದು, ಹಾಲಿ 4 ಹುದ್ದೆಗಳಲ್ಲಿ 04 ಮಂದಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇಂಗ್ಲೀಷ್ ಉಪನ್ಯಾಸಕರ ಹುದ್ದೆ ಖಾಲಿ ಇದ್ದು 08 ಗಂಟೆಗಳ ಅರೆಕಾಲಿಕ ಕಾರ್ಯಭಾರವಿರುವುದರಿಂದ ಪೂರ್ಣಕಾಲಿಕ ಉಪನ್ಯಾಸಕರ ಹುದ್ದೆಯನ್ನು ತುಂಬಲು ಕ್ರಮ ಕೈಗೊಳ್ಳಲಾಗಿಲ್ಲ. ಬೋಧಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ, ಮಂಜೂರಾಗಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಹುದ್ದೆಗಳ ಬಗ್ಗೆ ವಿವರಗಳು ಈ ಕೆಳಕಂಡಂತೆ ಇದೆ.

ವೃಂದಗಳು	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಹುದ್ದೆಗಳ ಸಂಖ್ಯೆ
ಪ್ರಥಮದರ್ಜೆ ಸಹಾಯಕರು		1	1 –
ದ್ವಿತೀಯದರ್ಜೆ ಸಹಾಯಕರು		1	1 –
ಬೆರಳಚ್ಚುಗಾರರು	1	1	–
ಗ್ರಂಥಾಲಯ ಸಹಾಯಕರು		1	– 1
ಅಟೆಂಡರ್	3	2	1
ಪರಿಚಾರಕರು	1	1	–

496 (677) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತುಮಕೂರು ವಿಶ್ವವಿದ್ಯಾಲಯವು ಯಾವ ಸಾಲಿನಿಂದ ಪ್ರಾರಂಭವಾಗಿದೆ;

ಆ) ಉದ್ಘಾಟನಾ ಕಾರ್ಯಕ್ರಮ ಯಾವಾಗ ನಡೆಯಿತು;

ಇ) ಈ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಸರ್ಕಾರವು ರೂಪಿಸಿರುವ ಯೋಜನೆಗಳೇನಾದರೂ ಇದೆಯೇ;

ಈ) ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ಕಾಲಮಿತಿಯನ್ನು ಹಾಕಿಕೊಂಡಿದೆಯೇ?

ಶ್ರೀ ಡಿ.ಹೆಚ್. ಶಂಕರಮೂರ್ತಿ(ಉನ್ನತ ಶಿಕ್ಷಣ ಸಚಿವರು):

ಅ) ತುಮಕೂರು ವಿಶ್ವವಿದ್ಯಾಲಯವು 2004ನೇ ಸಾಲಿನಿಂದ ಪ್ರಾರಂಭವಾಗಿದೆ.

ಆ) ತುಮಕೂರು ವಿಶ್ವವಿದ್ಯಾಲಯದ ಔಪಚಾರಿಕ ಉದ್ಘಾಟನಾ ಕಾರ್ಯಕ್ರಮ ಇನ್ನು ನಡೆದಿರುವುದಿಲ್ಲ. ಉದ್ಘಾಟನಾ ದಿನಾಂಕವನ್ನು ನಿಗದಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪ್ರಸ್ತುತ ಸರ್ಕಾರವು ಯಾವುದೇ ನಿರ್ದಿಷ್ಟ ಯೋಜನೆಗಳನ್ನು ರೂಪಿಸಿರುವುದಿಲ್ಲ. ಆದಾಗ್ಯೂ ವಿಶ್ವವಿದ್ಯಾಲಯವು ಸರ್ಕಾರವು ನೀಡಿರುವ ಜಮೀನಿನಲ್ಲಿ ವಿಶ್ವವಿದ್ಯಾಲಯದ ಕಟ್ಟಡಗಳ ನಿರ್ಮಾಣದ ಬಗ್ಗೆ ನೀಲಿ ನಕ್ಷೆ ಅಂದಾಜು ವೆಚ್ಚ ಈ ಬಗ್ಗೆ ವಿವರವಾದ ಪ್ರಸ್ತಾವನೆಯನ್ನು ಕಳುಹಿಸುವಂತೆ ತುಮಕೂರು ವಿಶ್ವವಿದ್ಯಾಲಯವನ್ನು ಕೋರಲಾಗಿದೆ.

ಈ) –ಇಲ್ಲ–

497 (678) ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಬೆಳ್ಳಾವಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುವ ಕೆರೆಗಳೆಷ್ಟು;

ಆ) ಬಹುತೇಕ ಕೆರೆಗಳು ಸುಸ್ಥಿತಿಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಕೆರೆಗಳನ್ನು ಸುಸ್ಥಿತಿಯಲ್ಲಿಡಲು ಬೇಕಾಗಿರುವ ಹಣವೆಷ್ಟು ಹಾಗೂ ಪ್ರಸ್ತುತ ಆಯವ್ಯಯದಲ್ಲಿ ಒದಗಿಸಲಾಗಿರುವ ಹಣವೆಷ್ಟು?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 3401 ಕೆರೆಗಳು ಬರುತ್ತದೆ.

ಆ) ಕೆಲವು ಕೆರೆಗಳು ಸುಸ್ಥಿತಿಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಪ್ರತಿ ಕೆರೆಯ ಬಗ್ಗೆ ವಿವರವಾದ ಅಂದಾಜನ್ನು ತಯಾರಿಸಿದಲ್ಲಿ ಮಾತ್ರ ಬೇಕಾಗುವ ಮೊತ್ತವನ್ನು ಅಂದಾಜಿಸಬಹುದು. ಆದುದರಿಂದ ಈಗ ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳಿಗಾಗಿ ರೂ. 116.305 ಕೋಟಿಗಳನ್ನು ಒದಗಿಸಲಾಗಿದೆ ಹಾಗೂ ಜಲಸಂವರ್ಧನೆ ಯೋಜನಾ ಸಂಘದ ಕಾಮಗಾರಿಗಳಿಗಾಗಿ ಜಿಲ್ಲಾ ಪಂಚಾಯತ್ ಕೆರೆಗಳೂ ಸೇರಿದಂತೆ ಒಟ್ಟು ರೂ. 180.00 ಕೋಟಿಗಳನ್ನು ಒದಗಿಸಲಾಗಿದೆ.